# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು 1963 ರ ನಿಯಮ 31 ರಿಂದ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ನಿಯಮ 14 ನ್ನು ಸಡಿಲಿಸಿ, ವೈದ್ಯಕೀಯ ವೆಚ್ಚ ಮರುಪಾವತಿ ಮಾಡುವ ಅಧಿಕಾರವನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸುವ ಕುರಿತು

* * *

**ಪ್ರಸ್ತಾವನೆ :-**

ಕರ್ನಾಟಕ ಸರ್ಕಾರಿ ನೌಕರರ ( ವೈದ್ಯಕೀಯ ಹಾಜರಾತಿ ) ನಿಯಮಗಳು 1963 ರ ನಿಯಮ 8 ಮತ್ತು 14 (3)ಕ್ಕೆ ಸಂಬಂಧಪಟ್ಟ ಶೆಡ್ಯೂಲ್ -I ಮತ್ತು II ರಲ್ಲಿ ಸೂಚಿಸಿರುವ ಸರ್ಕಾರದಿಂದ ಮಾನ್ಯತೆ ಹೊಂದಿರುವ ಆಸ್ಪತ್ರೆಗಳನ್ನು ಹೊರತುಪಡಿಸಿ, ಖಾಸಗಿ ಆಸ್ಪತ್ರೆಗಳಲ್ಲಿ ಸರ್ಕಾರಿ ನೌಕರರು ಪಡೆಯುವ ವೈದ್ಯಕೀಯ ಚಿಕಿತ್ಸೆಯ ವೆಚ್ಚವನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ನಿರ್ದೇಶಕರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಇವರು ನೀಡುವ ಅಭಿಪ್ರಾಯದಂತೆ ಮರುಪಾವತಿಸಲು ನಿಯಮ 14ನ್ನು ಮತ್ತು ಇತರ ನಿಯಮಗಳನ್ನು ಸಡಿಲಿಸುವ ಅಧಿಕಾರವು ನಿಯಮ 31ರಲ್ಲಿ ಸರ್ಕಾರಕ್ಕೆ ಪ್ರದತ್ತವಾಗಿರುತ್ತದೆ. ನಿಯಮ 14ನ್ನು ಸಡಿಲಿಸುವ ಪ್ರಕರಣಗಳಲ್ಲಿ ಸಿಆಸು ಇಲಾಖೆಯು ಅಭಿಪ್ರಾಯ ನೀಡುತ್ತಿದೆ ಹಾಗೂ ಆರ್ಥಿಕ ಇಲಾಖೆಯ ಸಹಮತಿ ಪಡೆಯುವ ಷರತ್ತಿಗೊಳಪಡಿಸಿ ಮರುಪಾವತಿಗೆ ಅವಕಾಶವನ್ನು ಕಲ್ಪಿಸಿ ಕೊಡಲಾಗುತ್ತಿದೆ.

ಮೇಲೆ ತಿಳಿಸಿರುವ ವಿಶೇಷ ಪ್ರಕರಣಗಳನ್ನು ಶೀಘ್ರವಾಗಿ ಇತ್ಯರ್ಥಗೊಳಿಸುವುವ ಬಗ್ಗೆ ಹಾಗೂ ಸರ್ಕಾರಿ ನೌಕರರಿಗೆ ಅಗುತ್ತಿರುವ ಅನಾನುಕೂಲವನ್ನು ತಡೆಗಟ್ಟಲು ಸಿಆಸು ಇಲಾಖೆಯು ಚಲಾಯಿಸುತ್ತಿರುವ ಅಧಿಕಾರವನ್ನು ಎಲ್ಲಾ ಆಡಳಿತ ಇಲಾಖೆಗಳ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸುವ ಬಗ್ಗೆ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ:-

**ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ: 34: ಎಸ್. ಎಂ. ಆರ್: 2011 ಬೆಂಗಳೂರು ದಿನಾಂಕ: 28.09.2011**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರಿ ನೌಕರರು (ವೈದ್ಯಕೀಯ ಹಾಜರಾತಿ) ನಿಯಮಗಳು 1963ರ ನಿಯಮ 14ನ್ನು ಸಡಿಲಿಸಲು ನಿಯಮ 31ರಿಂದ ಪ್ರದತ್ತವಾದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ಚಲಾಯಿಸುತ್ತಿರುವ ಅಧಿಕಾರವನ್ನು ಈ ಕೆಳಕಂಡಂತೆ ಪ್ರತ್ಯಾಯೋಜಿಸಲಾಗಿದೆ:-

| ಕ್ರಮ ಸಂಖ್ಯೆ | ಪ್ರಾಧಿಕಾರದ ವಿವರ | ಪ್ರತ್ಯಾಯೋಜಿಸಲಾಗಿರುವ ಅಧಿಕಾರ |
|---|---|---|
| 1 | ಸಂಬಂಧಪಟ್ಟ ಆಡಳಿತ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ | ಎಲ್ಲ ವೃಂದದ ಅಧಿಕಾರಿ / ನೌಕರರ ₹ 1.00ಲಕ್ಷದವರೆಗಿನ (ಒಂದು ಲಕ್ಷ) ವೈದ್ಯಕೀಯ ವೆಚ್ಚ ಮರುಪಾವತಿ |

..2.

| | | |
|---|---|---|
| 2 | ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ | ಎಲ್ಲ ವೃಂದದ ಅಧಿಕಾರಿ/ನೌಕರರ ₹ 1.00-5.00 ಲಕ್ಷದವರೆಗಿನ ವೈದ್ಯಕೀಯ ವೆಚ್ಚ ಮರುಪಾವತಿ. |

₹ 5.00 ಲಕ್ಷಕ್ಕಿಂತ ಹೆಚ್ಚಿನ ಮೊತ್ತ ಮತ್ತು ಇತರೆ ನಿಯಮಗಳ ಸಡಿಲಿಕೆಯ ಪ್ರಕರಣಗಳನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಯವರಿಂದ ಮಾನ್ಯ ಮುಖ್ಯಮಂತ್ರಿಯವರ ಆದೇಶಕ್ಕಾಗಿ ಸಲ್ಲಿಸಲಾಗುವುದು.

ಮೇಲ್ಕಂಡ ಅಧಿಕಾರ ಪ್ರತ್ಯಾಯೋಜನೆಯನ್ವಯ ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳು ಪ್ರತಿ ಪ್ರಕರಣವನ್ನು ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು 1963ರ ನಿಯಮಗಳನುಸಾರ ವೈದ್ಯಕೀಯ ವೆಚ್ಚ ಮರುಪಾವತಿಯ ಬಿಲ್ಲುಗಳನ್ನು ಎಲ್ಲಾ ದಾಖಲೆಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ, ನೈಜ ಪ್ರಕರಣಗಳಲ್ಲಿ ಮಾತ್ರ ನಿಯಮ ಸಡಿಲಿಸಿ ಮರುಪಾವತಿಗೆ ಕ್ರಮ ಕೈಗೊಳ್ಳತಕ್ಕದ್ದು. ಮೇಲ್ಕಂಡ ನಿಯಮಾವಳಿಯಲ್ಲಿರುವ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸುವುದರೊಂದಿಗೆ ಮರುಪಾವತಿಯ ಅರ್ಹತಾ ಮೊತ್ತದ ಬಗ್ಗೆ ನಿರ್ದೇಶಕರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಬೆಂಗಳೂರು ಇವರ ಅಭಿಪ್ರಾಯವನ್ನು ಪಡೆದ ನಂತರದಲ್ಲಿ ಆರ್ಥಿಕ ಇಲಾಖೆಯ ಸಹಮತಿ/ಅಭಿಪ್ರಾಯ ಪಡೆದೇ ಮರುಪಾವತಿಗೆ ಕ್ರಮ ಕೈಗೊಳ್ಳತಕ್ಕದ್ದು .

ಸಚಿವಾಲಯದ ಆಡಳಿತ ಇಲಾಖೆಗಳು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗೆ ಈ ಸಂಬಂಧ ನಿರ್ವಹಿಸಿರುವ ಪ್ರಕರಣಗಳ ವಿವರಗಳನ್ನು ಅನುಬಂಧದಲ್ಲಿರುವ ನಿಗದಿತ ನಮೂನೆಯಲ್ಲಿ ತ್ರೈಮಾಸಿಕ ವರದಿಯನ್ನು ಕ್ರಮವಾಗಿ ನೀಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಪಿ. ಮಾರ್ಕಂಡೇಯ)**
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಸೇವಾ ನಿಯಮಗಳು-2)

**ಇವರಿಗೆ:**

1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2) ಸರ್ಕಾರದ ಮುಖ್ಯ ಕಾರ್ಯದರ್ಶಿ.
3) ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು.
4) ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿ.
5) ಮುಖ್ಯಮಂತ್ರಿಯವರ ಕಾರ್ಯದರ್ಶಿಗಳು.
6) ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳು.
7) ಪ್ರಧಾನ ಕಾರ್ಯದರ್ಶಿ, ಕರ್ನಾಟಕ ವಿಧಾನ ಮಂಡಲ.
8) ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ/ಪರಿಷತ್ತು.

9) ನಿವಾಸಿ ಆಯುಕ್ತರು, ಕರ್ನಾಟಕ ಭವನ, ಕೌಟಿಲ್ಯ ಮಾರ್ಗ್, ಚಾಣಕ್ಯಪುರಿ, ನವದೆಹಲಿ-110 011.
10) ಎಲ್ಲಾ ಇಲಾಖಾ ಮುಖ್ಯಸ್ಥರು.
11) ಎಲ್ಲಾ ಪ್ರಾದೇಶಿಕ ಆಯುಕ್ತರು.
12) ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು/ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್.
13) ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು.
14) ರಾಜ್ಯದ ಜಿಲ್ಲಾ ಆಸ್ಪತ್ರೆಗಳ ಎಲ್ಲಾ ಜಿಲ್ಲಾ ವೈದ್ಯಾಧಿಕಾರಿಗಳು.
15) ಮಹಾ ನಿಬಂಧಕರು, ಕರ್ನಾಟಕ ಉಚ್ಛ ನ್ಯಾಯಾಲಯ, ಬೆಂಗಳೂರು.
16) ನಿಬಂಧಕರು, ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಬಿಡಿಎ ವಾಣಿಜ್ಯ ಸಂಕೀರ್ಣ, ಇಂದಿರಾನಗರ, ಬೆಂಗಳೂರು-560 038.
17) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
18) ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು.
19) ಸರ್ಕಾರದ ಎಲ್ಲಾ ಅಪರ/ಜಂಟಿ/ಉಪ/ಅಧೀನ ಕಾರ್ಯದರ್ಶಿಗಳು.
20) ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಬೆಂಗಳೂರು.
21) ಶಾಖಾ ರಕ್ಷಾ ಕಡತ/ಬಿಡಿ ಪ್ರತಿಗಳು.

# ಅನುಬಂಧ

## ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು 1963ರ ನಿಯಮ 31ರಡಿ ನಿರ್ವಹಿಸಿರುವ ಪ್ರಕರಣಗಳ ತ್ರೈಮಾಸಿಕ ವಿವರ

(____ ವರ್ಷದ ಮಾರ್ಚ್/ಜೂನ್/ಸಪ್ಟೆಂಬರ್/ಡಿಸೆಂಬರ್ ಅಂತ್ಯಕ್ಕೆ)

| ಕ್ರ. ಸಂ. | ಕ್ಲೇಮುಗಳ ವಿವರ | | ಅಧಿಕಾರಿ/ನೌಕರರ ಸಂಖ್ಯೆ | | | | ಒಟ್ಟು ಮೊತ್ತ (ರೂ. ಗಳಲ್ಲಿ) |
|---|---|---|---|---|---|---|---|
| | ಸಡಿಲಿಕೆಯ ವಿವರ | ಪ್ರಕರಣಗಳ ಸಂಖ್ಯೆ | ಗುಂಪು-ಎ | ಗುಂಪು-ಬಿ | ಗುಂಪು-ಸಿ | ಗುಂಪು-ಡಿ | |
| 1. | ರಾಜ್ಯದಲ್ಲಿ ಮಾನ್ಯತೆ ಪಡೆಯದಿರುವ/ರಾಜ್ಯದ ಹೊರಗಿನ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದಿರುವವರ ಸಂಖ್ಯೆ | ರಾಜ್ಯದಲ್ಲಿ | | | | | |
| | | ಹೊರ ರಾಜ್ಯದಲ್ಲಿ | | | | | |
| 2. | ಎಲ್ಲ ಪ್ರಕರಣಗಳಲ್ಲಿ ಸಿ.ಜಿ.ಹೆಚ್.ಎಸ್. ದರಪಟ್ಟಿ ಪಾಲಿಸಲಾಗಿದೆಯೇ | ಹೌದು/ಇಲ್ಲ | | | | | |
| 3. | ಎಲ್ಲ ಪ್ರಕರಣಗಳಲ್ಲಿ ನಿಯಮಗಳಲ್ಲಿ ನಿಗದಿಪಡಿಸಿದಂತೆ ವೈದ್ಯಕೀಯ ವಿಧಿವಿಧಾನಗಳನ್ನು ಪಾಲಿಸಲಾಗಿದೆಯೇ | ಹೌದು/ಇಲ್ಲ | | | | | |
| 4. | ಈ ಪ್ರಕರಣಗಳಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ನಿರ್ದೇಶಕರ ಅಭಿಪ್ರಾಯದಂತೆ ಮಾತ್ರ ಮೊತ್ತ ಮರುಪಾವತಿ ಆಗಿದೆಯೇ | ಹೌದು/ಇಲ್ಲ | | | | | |
| | ಒಟ್ಟು | | | | | | |

ಧೃಢೀಕರಿಸಲಾಗಿದೆ

ಪ್ರಧಾನ ಕಾರ್ಯದರ್ಶಿಗಳು/ಸರ್ಕಾರದ ಕಾರ್ಯದರ್ಶಿಗಳು

34smr2011st